**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಮಾರ್ಚ್ 31.**

**ಪಾಠ 13** **ಮಾರ್ಚ್ 24–30**

## ಪಾರುಪತ್ಯಗಾರಿಕೆಯ ಪ್ರತಿಫಲಗಳು

ಸಬ್ಬತ್ತಿನ ಮಧ್ಯಾಹ್ನ:

ಈ ವಾರದ ಪಾಠದ ಅಧ್ಯಯನಕ್ಕಾಗಿ: 2 ತಿಮೋಥಿ 3:1–9, ಯೇಹೆಜ್ಕೆಲನು14:14, ಫಿಲಿಪ್ಪಿಯವರಿಗೆ4–13, ಜ್ಞಾನೋಕ್ತಿಗಳು 3:5, 1 ಪೇತ್ರನು 2:11,12, ಮತ್ತಾಯ 7:23; 25:21.

**ಸ್ಮರಣವಾಕ್ಯ: 'ನಿಮ್ಮ ನಡುವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು.' (1 ಪೇತ್ರನು 2:12).**

ಪಾರುಪತ್ಯಗಾರರಾಗಿ ನಾವು ಆರಾಧಿಸುವ ದೇವರಿಗೆ ಸಾಕ್ಷಿಗಳಾಗಿ ಜೀವಿಸಬೇಕು, ಇದರ ಅರ್ಥವೆಂದರೆ ನಮ್ಮ ಸುತ್ತಲೂ ಇರುವವರ ಮೇಲೆ ನಾವು ಸಕಾರಾತ್ಮಕವಾದ ಪ್ರಭಾವವನ್ನು ಬೀರಬೇಕು, ಅದು ಒಳ್ಳೆಯದಾದ ಪ್ರಭಾವವಾಗಿರಬೇಕು.

ನಮ್ಮ ಸುತ್ತಲೂ ಇರುವ ಪ್ರಪಂಚದಿಂದ ನಮ್ಮ ಕಥೆಯು ಬೇರ್ಪಟ್ಟಿಲ್ಲ, ನಮಗೆ ನೀಡಲಾಗಿರುವ ವಿಷಯಗಳ ಕುರಿತಾಗಿ ತಿಳಿಯದೆ ಇರುವವರಿಗೆ ಅದರ ವಿಷಯವಾಗಿ ಸಾಕ್ಷಿಯಾಗಿರಲು ನಮಗೆ ದೊರಕಿರುವ ಭಾಗ್ಯವಾಗಿದೆ. ದೇವರು ಕೊಟ್ಟಿರುವ ವಿಷಯಗಳನ್ನು ಚೆನ್ನಾಗಿ ನೋಡಿಕೊಳ್ಳಲು ಪ್ರಯತ್ನಪಡುವುದೇ ಪಾರುಪತ್ಯಗಾರಿಕೆಯಾಗಿದೆ. ಭೂಲೋಕದಲ್ಲಿರುವ ಇತರರಿಗೆ ವ್ಯತ್ಯಾಸವಾಗಿ ಇರುವುದಕ್ಕಾಗಿ ದೇವರು ನಮಗೆ ತಲಾಂತುಗಳನ್ನು ನೀಡಿದ್ದಾನೆ. (2 ಕೊರಿಂಥ 6:17), ಮತ್ತು ಬೇರೆಯವರು ಗಮನಿಸುವ ಮತ್ತು ಕುತೂಹಲದಿಂದ ಕೇಳುವ ವಿಷಯವಾಗಿದೆ. ಆದ್ದರಿಂದ 'ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ, ನಿಮ್ಮಲ್ಲಿರುವ ನಿರೀಕ್ಷೆಗೆ ಅಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವದಕ್ಕೆ ಯಾವಾಗಲೂ ಸಿದ್ದವಾಗಿರಿ. ಆದರೆ ಅದನ್ನು ಸಾತ್ವಿಕತ್ವದಿಂದಲೂ

ಮನೋಭೀತಿಯಿಂದಲೂ ಹೇಳಿರಿ.' (1 ಪೇತ್ರನು 3:15) ನಮಗೆ ಹೇಳಲಾಗಿದೆ.

ಈ ಕೊನೆಯ ಪಾಠದಲ್ಲಿ ವ್ಯಯಕ್ತಿಕ ಲಾಭಗಳು, ಆತ್ಮೀಯ ಫಲಿತಾಂಶಗಳು, ನಮ್ಮ ಪ್ರಭಾವದ ಸಕಾರಾತ್ಮಕವಾದ ಪ್ರತಿಫಲ, ಮತ್ತು ಪಾರುಪತ್ಯಗಾರನ ಜೀವನದಲ್ಲಿ ಇರುವ ತೃಪ್ತಿ ಕ್ರಿಸ್ತನು ನಿಮ್ಮಲ್ಲದ್ದು ಪ್ರಭಾವದ ನಿರೀಕ್ಷೆಗೆ ಅಧಾರಭೂತನಾಗಿರುವುದೇ.

**ಪಾಠ 13 ಪಾರುಪತ್ಯಗಾರಿಕೆಯ ಪ್ರತಿಫಲಗಳು ಮಾರ್ಚ್ 24–30**

**ಭಾನುವಾರ ಮಾರ್ಚ್ 25**

## ಪಾರುಪತ್ಯಗಾರಿಕೆ ಮತ್ತು ದೈವಭಕ್ತಿ

ದೈವಭಕ್ತಿ ಎನ್ನುವುದು ಬಹಳ ವಿಶಾಲವಾದ ಅಂಶ ದೈವಭಕ್ತರು ಪವಿತ್ರವಾದ ಜೀವನವನ್ನು ನಡೆಸುತ್ತಾರೆ. (ತೀತನಗೆ 1:1) ಭಕ್ತಿಯ ಸ್ವಭಾವ ಮತ್ತು ದೇವರಿಗೆ ಇಷ್ಟವಾದ ಕ್ರಿಯೆಗಳನ್ನು ನಡೆಸುವುದೇ ಕ್ರಿಸ್ತನ ಹಾಗೆ ಜೀವಿಸುವುದಾಗಿದೆ.(ಕೀರ್ತನೆಗಳು 4:3, ತೀತನಗೆ 2:12)ದೈವಭಕ್ತಿಯು ನಿಜವಾದ ಧರ್ಮದ ಸಾಕ್ಷಿಯಾಗಿದೆ ಮತ್ತು ನಿತ್ಯತ್ವದ ವಾಗ್ದಾನವನ್ನು ಹೊಂದುತ್ತದೆ. ಯಾವುದೇ ತತ್ವಜ್ಞಾನ, ಸಂಪತ್ತು, ಪ್ರತಿಷ್ಠೆ, ಅಧಿಕಾರ, ಅಥವಾ ಕೋರಿಕೆಯ ಜನನ ಇಂತಹ ವಾಗ್ದಾನವನ್ನು ನೀಡುವುದಿಲ್ಲ.

2 ತಿಮೋಥಿ 3:1–9 ನ್ನು ಓದಿರಿ, ನಂಬಿಕೆಯ ಪಾರುಪತ್ಯಗಾರನ ಜೀವನದ ಕುರಿತಾಗಿ ಪೌಲನು ಯಾವ ಎಚ್ಚರಿಕೆಯನ್ನು ನೀಡುತ್ತಾನೆ.

ಯೋಬನ ಪುಸ್ತಕವು ಯೋಬನ ಗುಣ ಮತ್ತು ಕ್ರಿಯಗಳ ವಿವರಣೆಯನ್ನು ನೀಡುತ್ತದೆ. ಕಷ್ಟಗಳ ನಡುವೆ ಯಾವ ರೀತಿಯಲ್ಲಿ ದೈವಿಕ ಜೀವನವನ್ನು ನಡೆಸುವುದು ಎಂದು ಇಲ್ಲಿ ಹೇಳಲಾಗಿದೆ. ಸೈತಾನನು ಅಂತಹ ಜೀವನಶೈಲಿಯನ್ನು ದ್ವೇಷಿಸುತ್ತಾನೆ ಎಂದು ತಿಳಿಸುತ್ತದೆ. ಯೋಬನ ವಿಶ್ವಾಸ ಮತ್ತು ಜಿವನಶೈಲಿಯಲ್ಲಿ ಯಾರೂ ಕೂಡ ಯೋಬನ ಹಾಗೆ ಇಲ್ಲ ಎಂದು ದೇವರು ಕೂಡ ಒಪ್ಪಿಕೊಳ್ಳುತ್ತಾನೆ. (ಯೋಬನು 2:3).



ಊಚ್ ದೇಶದಲ್ಲಿ ಯೋಬನೆಂಬ ಒಬ್ಬ ಮನುಷ್ಯನಿದ್ದನು ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದ್ದನ್ನು ನಿರಾಕರಿಸುತ್ತಾ ನಿರ್ದೋಷಿಯೂ ಯಥಾರ್ಥಚಿತ್ತನೂ ಆಗಿದ್ದನು (ಯೋಬ 1:1) ಇದರಿಂದ, ದೇವರಲ್ಲಿ ಭಯಭಕ್ತಿಯಿರುವ ವ್ಯಕ್ತಿಯು ಕೇವಲ ಮಾತಿನಲ್ಲಿ ಮತ್ತು ಧಾರ್ಮಿಕ ಕ್ರಿಯೆಗಳಲ್ಲಿ ಮಾತ್ರ ತೋರಿಸುವುದು ಮಾತ್ರವಲ್ಲದೆ ಅದು ಅವನ ಜೀವನ ಶೈಲಿಯಾಗಿದೆ. ದೈವಭಕ್ತಿಯಿರುವ ವ್ಯಕ್ತಿಯು ತನ್ನ ಅನೇಕ ಕಷ್ಟಗಳು ಇದ್ದರೂ ಕೂಡ ಜೀವನದಲ್ಲಿ ತನ್ನ ಭಕ್ತಿಯನ್ನು ಕ್ರಿಯೆಗಳ ಮೂಲಕ ತೋರಿಸುತ್ತಾನೆ. ದೈವಭಕ್ತಿ ಎಂದರೆ ಪರಿಪೂರ್ಣತೆಯಲ್ಲ, ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪರಿಪೂರ್ಣತೆಯನ್ನು ತೋರಿಸುವುದಾಗಿದೆ.

ಯೆಹೆಜ್ಕೆಲನು 14:14, ಈ ಮನುಷ್ಯರ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ? ಇವು ನಮ್ಮಲ್ಲಿ ಇರಬೇಕಾದ ಸಾಮಾನ್ಯ ಗುಣಗಳ ಕುರಿತಾಗಿ ಏನು ಹೇಳುತ್ತವೆ?

ದೈವಭಕ್ತಿಯ ನಿಜಸ್ವರೂಪವೇ ಪಾರುಪತ್ಯಗಾರಿಕೆಯಾಗಿದೆ. ನಂಬಿಕೆಯ ಪಾರುಪತ್ಯಗಾರನಗೆ ದೈವಭಕ್ತಿಯು ಕೇವಲ ತೋರಿಕೆಯಾಗಿರುವುದಿಲ್ಲ. ಅವರು ದೈವಭಕ್ತಿಯಲ್ಲಿ ಇರುವರು ಮತ್ತು ಅದು ಅವರ ಕ್ರಿಯೆಗಳಲ್ಲಿ ತೋರಿಸುತ್ತಾರೆ. ಅದರಲ್ಲಿ ದೇವರು ಅವರ ವಶಕ್ಕೆ ಕೊಟ್ಟಿರುವ ವಸ್ತುಗಳನ್ನು ಹೇಗೆ ನಿಭಾಯಿಸುತ್ತಾರೆ ಎಂದು ತೋರಿಸುತ್ತಾರೆ. ಅವರ ನಂಬಿಕೆಯು ಅವರು ಮಾಡುವ ಕ್ರಿಯೆಗಳಲ್ಲಿ ಮಾತ್ರವಲ್ಲದೆ ಅವರು ಮಾಡದೆ ಇರುವ ಕ್ರಿಯೆಗಳಲ್ಲಿ ಕೂಡ ಕಾಣುತ್ತದೆ.

**ಪಾಠ 13 ಪಾರುಪತ್ಯಗಾರಿಕೆಯ ಪ್ರತಿಫಲಗಳು ಮಾರ್ಚ್ 24–30**

**ಸೋಮವಾರ ಮಾರ್ಚ್ 26**

## ತೃಪ್ತಿ

'ಕೊರತೆಯಲ್ಲಿದ್ದೆನೆಂದೂ ಸೂಚಿಸುವುದಕ್ಕೆ ನಾನು ಇದನ್ನು ಹೇಳುವುದಿಲ್ಲ ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವುದನ್ನು ಕಲಿತುಕೊಂಡಿದ್ದೇನೆ.'(ಫಿಲಿಪ್ಪಿಯವರಿಗೆ

4:11). ನಾವು ಯಾವುದೇ ಸ್ಥಿತಿಯಲ್ಲಿ ಇದ್ದರೂ ಕೂಡ ಸಂತೃಪ್ತಿಯಾಗಿರಬೇಕಾದರೆ ಆ ಸಂತೃಪ್ತಿಯು ಎಲ್ಲಿಂದ ಬರಬೇಕಾಗಿದೆ?

---

---

ಪೌಲನು ತಿಮೋಥಿಗೆ ಬರೆಯುತ್ತಾ ಸತ್ಯಹೀನರ ಕುರಿತಾಗಿ ಹೇಳುತ್ತಾನೆ 'ದೇವಭಕ್ತಿಯನ್ನು ಲಾಭಸಾಧನವೆಂದು' ಎಣಿಸುವ ಜನರು ಇರುತ್ತಾರೆ. ಇದಕ್ಕಿಂತ ಮಿಗಿಲಾದ ದೂರದರ್ಶನ ಬೋಧಕರ ವ್ಯಾಪಾರೀಕರಣ ಇನ್ನೊಂದು ಬೇಕೇ? ನೀವು ನಂಬಿಗಸ್ತರಾಗಿದ್ದರೆ ಸಾಕು (ಈ ನಂಬಿಕೆಯು ಅವರ ಸುವಾರ್ತೆ ಸೇವೆಗೆ ಸಹಾಯ ಮಾಡುವುದಾಗಿದೆ.) ಹಾಗಾದರೆ ಈ ವೀಕ್ಷಕರು ಕೂಡ ಶ್ರೀಮಂತರಾಗಬೇಕಲ್ಲವೇ? ಶ್ರೀಮಂತಿಕೆಯನ್ನು ನಂಬಿಕೆಗೆ ಸೇರಿಸುವುದು ಭೌತಿಕವಾದದ ಮತ್ತೊಂದು ಮುಖವಾಗಿದೆ ಆದರೆ ಅದನ್ನು ಕ್ರಿಸ್ತತ್ವದ ಮುಖವಾಡದಲ್ಲಿ ಬೋಧಿಸುವುದಾಗಿದೆ.

ನಿಜವಾಗಿ, ದೈವಭಕ್ತಿಯು ಶ್ರೀಮಂತಿಕೆಯ ಜೊತೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ಒಂದು ಹಾಗಿದ್ದರೆ ಪ್ರಪಂಚದ ಅತೀ ದುಷ್ಟ ಜನರು ದೈವಭಕ್ತರಾಗುತ್ತಿದ್ದರು ಯಾಕೆಂದರೆ ಅವರು ಪ್ರಪಂಚದಲ್ಲಿಯೇ ಶ್ರೀಮಂತರು. ಅದಕ್ಕೆ ವಿರುದ್ದವಾಗಿ, ಪೌಲನು ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇ? (1ತಿಮೋಥಿ 6:6) ಎಂದು ಬರೆಯುತ್ತಾನೆ. ಸಂತುಷ್ಟಿಸಹಿತವಾದ ದೈವಭಕ್ತಿಯು ಯಾವುದೇ ಸನ್ನಿವೇಶದಲ್ಲಿ ಇರಬಹುದಾದ ದೊಡ್ಡ ಅಸ್ತಿ ಯಾಕೆಂದರೆ ದೇವರ ಕೃಪೆಯು ಎಲ್ಲಾ ಹಣಕಾಸಿನ ಲಾಭಕ್ಕಿಂತ ದೊಡ್ಡದು. .ಅದ್ದರಿಂದ ನಾವು 'ಊಟ ಮತ್ತು ಬಟ್ಟೆಗಳಲ್ಲಿ' (1ತಿಮೋಥಿ 6:8) ಸಂತೃಪ್ತಿಯನ್ನು ಪಡಬೇಕು. ಕೊನೆಯಲ್ಲಿ ನಾವು ಎಷ್ಟು ಹೊಂದಿದ್ದರೂ ಕೂಡ ನಾವು ಇನ್ನೂ ಹೆಚ್ಚು ಹೊಂದಬೇಕು ಎಂಬ ಬಯಕೆ ಇರುತ್ತದೆ.

'ಸಂತೃಪ್ತಿಯು ಎಲ್ಲಾ ಪರಿಸ್ಥಿತಿಗಳಲ್ಲಿ ಶ್ರೇಷ್ಠವಾದ ಕಲೆ, ಆತ್ಮೀಯ ರಹಸ್ಯ. ಇದನ್ನು ನಾವು ಕಲಿಯಬೇಕು,ಮತ್ತು ರಹಸ್ಯದ ವಿಷಯವಾಗಿ ಕಲಿಯಬೇಕು. ....ಕ್ರೈಸ್ತಿಯ ಸಂತೃಪ್ತಿಯು ಸಿಹಿ, ಅಂತರಿಕ, ಶಾಂತಿ, ಮತ್ತು ಕೃಪೆಯ ಅತ್ಮವಾಗಿದ್ದು, ಇದು ದೇವರ ಜ್ಞಾನದ ಮತ್ತು ತಂದೆಯ ಪ್ರೀತಿಗೆ ಯಾವಾಗಲೂ ಒಗ್ಗೂಡುತ್ತದೆ.... ಇದು



ಬೆಲೆಬಾಳುವ ಸುಗಂಧತೈಲವಿದ್ದಂತೆ ಮತ್ತು ಅದು ಸಮಾಧಾನ ತರುವಂಥದ್ದು ಹಾಗೂ ಸಂಕಷ್ಟದ ಸಮಯದಲ್ಲಿ ಹಾಗೂ ಕಷ್ಟದ ಪರಿಸ್ಥಿತಿಗಳಲ್ಲಿ, ಗಾಯಗೊಂಡ ಹೃದಯಕ್ಕೆ ಒಳ್ಳೆಯ ಔಷಧವಾಗಿದೆ.

ರೋಮ 8:28, ಇಬ್ರಿಯರಿಗೆ 13:5, ಮತ್ತು ಫಿಲಿಪ್ಪಿಯವರಿಗೆ 4:4–13 ನ್ನು ಓದಿರಿ ನಾವು ಸಂತೃಪ್ತಿಯ ಜೀವನವನ್ನು ಹೊಂದಲು ಈ ವಚನಗಳು ಹೇಗೆ ಸಹಾಯ ಮಾಡುತ್ತವೆ.

---

---

**ಪಾಠ 13 ಪಾರುಪತ್ಯಗಾರಿಕೆಯ ಪ್ರತಿಫಲಗಳು ಮಾರ್ಚ್ 24–30**

**ಮಂಗಳವಾರ ಮಾರ್ಚ್ 27**

## ನಂಬಿಕೆ

ಜ್ಞಾನೋಕ್ತಿಗಳು 3:5ನ್ನು ಓದಿರಿ ಅಲ್ಲಿ ನಮಗೆ ಯಾವ ಮುಖ್ಯವಾದ ಸಂದೇಶವಿದೆ, ಅದರಲ್ಲೂ ಕೊನೆಯ ಭಾಗದಲ್ಲಿ ನಮ್ಮ ಸ್ವಂತ ಜ್ಞಾನದಲ್ಲಿ 'ಕಲಿಯಬಾರದು' ಇದರ ಕುರಿತಾಗಿ ಏನು ಹೇಳುತ್ತದೆ? (ಯೆಶಾಯ 55:9, 1 ಕೊರಿಂಥ 4:5, 13:12)

---

---

ಪ್ರತಿಯೊಬ್ಬ ನಂಬಿಕೆಯ ಪಾರುಪತ್ಯಗಾರನ ಗುರಿಯು ಕೂಡ "ಸ್ವಬುದ್ದಿಯನ್ನು ಅಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನಲ್ಲಿ ಭರವಸೆಯಿಡು" (ಜ್ಞಾನೋಕ್ತಿಗಳು 3:5)

ಖಂಡಿತವಾಗಿ, ಅದನ್ನು ಹೇಳುವುದು ಸುಲಭ ಆದರೆ ಆಚರಿಸುವುದು ಬಹಳ ಕಷ್ಟ. ನಾವು ಎಷ್ಟು ಬಾರಿ ಜ್ಞಾನದಲ್ಲಿ ದೇವರ ಮೇಲೆ ಅಧಾರವಾಗಿರುತ್ತೇವೆ ಮತ್ತು ಆತನ ಪ್ರೀತಿ ಮತ್ತು ಆರೈಕೆಯಲ್ಲಿ ನಂಬಿಕೆಯಿಡುತ್ತೇವೆ, ಹಾಗೂ ಮತ್ತೆ ಅದರ ಕುರಿತಾಗಿ ಚಿಂತಿಸುತ್ತೇವೆ? ಕೆಲವು ಸಮಯಗಳಲ್ಲಿ ನಮ್ಮ ಸ್ವಂತ ಆಲೋಚನೆಯಲ್ಲಿ

ಭವಿಷ್ಯವು ಬಹಳ ಭಯಂಕರವಾಗಿ ಕಾಣುತ್ತದೆ.

ಹಾಗಾದರೆ, ನಾವು ದೇವರ ಪಾರುಪತ್ಯಗಾರರಾಗಿ ದೇವರಲ್ಲಿ ನಂಬಿಕೆಯಿಡುವುದನ್ನು ಹೇಗೆ ಕಲಿಯುತ್ತೇವೆ? ನಂಬಿಕೆಯಲ್ಲಿ ಹೆಜ್ಜೆಯಿಟ್ಟು ಮತ್ತು ಈಗ ನಾವು ಮಾಡುವ ಎಲ್ಲದರಲ್ಲೂ ಕೂಡ ಆತನಗೆ ವಿಧೇಯತೆಯನ್ನು ತೋರಿಸುವುದರ ಮೂಲಕ. ನಂಬಿಕೆಯು ಪ್ರಯೋಜನವನ್ನು ಬಯಸದ ಮನಸ್ಸಿನ ಒಂದು ಕ್ರಿಯೆಯಾಗಿದೆ: ಇದಕ್ಕೆ ವಿರುದ್ದವಾಗಿ ನಾವು ದೇವರನ್ನು ಹೆಚ್ಚು ನಂಬುವುದರ ಮೂಲಕ ಅದು ಬೆಳೆಯುತ್ತದೆ. ನಂಬಿಕೆಯ ಪಾರುಪತ್ಯಗಾರರಾಗಿ ಜೀವಿಸುವುದು ಎಂದರೆ ದೇವರಲ್ಲಿ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವುದಾಗಿದೆ. ಈ ನಂಬಿಕೆಯು ಪಾರುಪತ್ಯಗಾರನ ಜೀವನದ ಮೂಲಾಧಾರ ಮತ್ತು ಮುನ್ನಡೆಸುವ ಶಕ್ತಿಯಾಗಿದೆ. ಮತ್ತು ಅದು ನಾವು ಮಾಡುವ ಎಲ್ಲಾ ಕ್ರಿಯೆಗಳಲ್ಲಿ ಕಾಣುವಂಥದ್ದಾಗಿದೆ.

'ಪೂರ್ಣ ಮನಸ್ಸಿನಿಂದ ದೇವರಲ್ಲಿ ನಂಬಿಕೆಯಿಡಿ' 'ನಿಮ್ಮ ಹೃದಯ' ಎಂಬ ಪದವನ್ನು ಸತ್ಯವೇದದಲ್ಲಿ ರೂಪಕವಾಗಿ ಉಪಯೋಗಿಸಲಾಗಿದೆ. ನಾವು ಅಂತರ್ಯದಲ್ಲಿ ಏನಾಗಿದ್ದೇವೆ ಎಂಬುದನ್ನು ನಮ್ಮ ಹೃದಯದ ಆಲೋಚನೆಗಳು ತೀರ್ಮಾನಸುತ್ತವೆ. (ಮತ್ತಾಯ 22:37). ಇದರಲ್ಲಿ ನಮ್ಮ ಅಸ್ತಿತ್ವದ ಕೇಂದ್ರಬಿಂದುವಾದ ಸ್ವಭಾವ, ಉದ್ದೇಶಗಳು, ಮತ್ತು ಅಂತರ್ಯಗಳು ಕೂಡ ಸೇರಿವೆ.

ನೀವು ನಿಯಂತ್ರಿಸಲಾಗದ ವಿಷಯಗಳಲ್ಲಿ ದೇವರನ್ನು ನಂಬುವುದು ಬಹಳ ಸುಲಭ. ಇಂತಹ ಪರಿಸ್ಥಿತಿಗಳಲ್ಲಿ ನಮಗೆ ಬೇರೆ ದಾರಿಯಿಲ್ಲ ಬದಲಿಗೆ ಆತನಲ್ಲಿ ನಂಬಿಕೆಯಿಡಬೇಕು. ಅದಕ್ಕೆ ವಿರುದ್ದವಾಗಿ, ಹೃದಯದಿಂದ ಬರುವ 'ನಿಜವಾದ ವಿಶ್ವಾಸ' ನಾವು ನಿಯಂತ್ರಿಸಬಹುದಾದ ವಿಷಯಗಳಲ್ಲಿ ದೇವರನ್ನು ನಂಬುವುದಾಗಿದೆ, ಮತ್ತು ದೇವರಲ್ಲಿ ನಮ್ಮ ನಂಬಿಕೆಯ ಮೂಲಕ ಒಂದಲ್ಲ ಒಂದು ದಾರಿಯನ್ನು ಆಯ್ಕೆಮಾಡಬೇಕಾಗುತ್ತದೆ.

ಪೂರ್ಣ ಹೃದಯದಿಂದ ದೇವರನ್ನು ನಂಬುವುದನ್ನು ಅಪೋಸ್ತಲರು ಉದಾಹರಿಸುತ್ತಾರೆ. 'ಈಗ ದೇವರ ಕೆಲಸ ಮಾಡುವವರ ಹಾಗೆ ಅವರು ಕೂಡ ಬಲಹೀನರಾಗಿ ಮತ್ತು ಅಸಹಾಯಕರಾಗಿದ್ದರು. ಆದರೆ ಅವರು ತಮ್ಮ ಸಂಪೂರ್ಣ ನಂಬಿಕೆಯನ್ನು ದೇವರಲ್ಲಿ ಇಟ್ಟರು. ಅವರಲ್ಲಿದ್ದ ಆಸ್ತಿಯು ಆತ್ಮದ ಮತ್ತು ಮನಸ್ಸಿನ ಮಾತನ್ನು ಕೇಳುವಂತೆ ಇತ್ತು. ಮತ್ತು ದೇವರನ್ನು ಮೊದಲ ಸ್ಥಾನದಲ್ಲಿ ಮತ್ತು ಉತ್ತಮ ಸ್ಥಾನದಲ್ಲಿ ಇಡುವವರ ಎಲ್ಲರ ಸಂಗಡ ಇರತ್ತದೆ.' **ಎಲೆನ್ ಜಿ ವೈಟ್, ಗಾಸ್ಪೆಲ್ ವರ್ಕರ್ಸ್, ಪುಟ 25.**



ನೀವು ನಿಯಂತ್ರಿಸಲಾಗದ ವಿಷಯಗಳಲ್ಲಿ ದೇವರನ್ನು ನಂಬುವುದು ಬಹಳ ಸುಲಭ. ಆದರೆ ನೀವು ನಿಯಂತ್ರಿಸುವ ವಿಷಯಗಳಲ್ಲಿ ಹೇಗೆ ನಡೆದುಕೊಳ್ಳುವಿರಿ? ನಿಮ್ಮ ಜೀವನದಲ್ಲಿ ನೀವು ಏನು ಆಯ್ಕೆ ಮಾಡಿಕೊಳ್ಳಬೇಕು ಎಂಬುದರ ಕುರಿತಾಗಿ ದೇವರು ನಮ್ಮನ್ನು ಯಾವ ರೀತಿಯಲ್ಲಿ ನಡೆಸುತ್ತಿದ್ದಾನೆ ಎಂದು ಪರೀಕ್ಷಿಸಿಕೊಳ್ಳಿರಿ?

**ಪಾಠ 13 ಪಾರುಪತ್ಯಗಾರಿಕೆಯ ಪ್ರತಿಫಲಗಳು ಮಾರ್ಚ್ 24–30**

**ಬುಧವಾರ ಮಾರ್ಚ್ 28**

## ನಮ್ಮ ಪ್ರಭಾವ

'ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ. ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದಿರಿ' (ಎಫೆಸ 5:8). ಹೃದಯದ ಪರಿವರ್ತನೆಯು ಬಹಿರಂಗವಾಗಿ ಹೇಗೆ ಕಾಣುತ್ತದೆ ಎಂಬುದನ್ನು ಪೌಲನು ಇಲ್ಲಿ ವಿವರಿಸುತ್ತಾನೆ. ನಾವು 'ಬೆಳಕಿನಲ್ಲಿ ನಡೆಯುವ ಹಾಗೆ' (1 ಯೋಹಾನ 1:7, ಯೆಶಾಯ 30:). ಒಳ್ಳೆಯ ನಿರ್ವಹಣೆಯ ಪಾರುಪತ್ಯಗಾರಿಕೆಯು ಕತ್ತಲೆಯ ಲೋಕದಲ್ಲಿ ಪ್ರಭಾವ ಬೀರುವ ಬೆಳಕಾಗಿರಬೇಕು.

ಯೇಸು ಹೇಳಿದರು 'ನಾನು ಲೋಕಕ್ಕೆ ಬೆಳಕಾಗಿದ್ದೇನೆ' (ಯೋಹಾನ 8:12), ನಮ್ಮ ಸ್ಥಿರವಾದ ಸ್ವಭಾವದಿಂದ ದೇವರ ಬೆಳಕನ್ನು ಬಹಿರಂಗವಾಗಿ ಅನುದಿನದ ಜೀವನದಲ್ಲಿ ತೋರಿಸುವುದಾಗಿದೆ.

ನಮ್ಮ ಪಾರುಪತ್ಯಗಾರಿಕೆಯು ತೋರಿಸುವ ವಿಧಾನದಿಂದ ದೇವರಿಗೆ ಹೇಗೆ ಮಹಿಮೆ ತರುತ್ತದೆ. ನಾವು ಮಾಡುವ ಕ್ರಿಯೆಗಳು ಇತರರ ಮೇಲೆ ಹೇಗೆ ಪ್ರಭಾವವನ್ನು ಬೀರುತ್ತದೆ. ಮತ್ತಾಯ 5:16, ತೀತನಗೆ 2:7, 1 ಪೇತ್ರನು 2:11,12.

ದೇವರ ಅಸ್ತಿಯನ್ನು ನಿರ್ವಹಿಸುವುದು ಪಾರುಪತ್ಯಗಾರಿಕೆಯಾಗಿದೆ, ಆದರೆ ಅದು ಈ ಜವಾಬ್ದಾರಿಗಿಂತ ಹೆಚ್ಚಿನದಾಗಿದೆ. ನಮ್ಮ ಪಾರುಪತ್ಯಗಾರಿಕೆಯನ್ನು ನಮ್ಮ ಕುಟುಂಬಗಳ, ಸಮುದಾಯಗಳ, ಪ್ರಪಂಚದ, ಮತ್ತು ಇಡೀ ಲೋಕಕ್ಕೆ ತೋರಿಸುವುದಾಗಿದೆ.(1 ಕೊರಿಂಥ 4:9). ನಮ್ಮ ಜೀವನದ ಮೇಲೆ ದೇವರ ರಾಜ್ಯದ ನಿಯಮಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ತೋರಿಸುವುದೇ ಪಾರುಪತ್ಯಗಾರಿಕೆಯಾಗಿದೆ. ಮತ್ತು ಇದರಿಂದ, ನಾವು ಇತರರ ಮೇಲೆ ಪ್ರಭಾವ ಬೀರಬಹುದು. ನಮ್ಮ ಕರುಣೆ ಮತ್ತು ನೈತಿಕತೆಯ ಮೂಲಕ ಕ್ರಿಸ್ತನನ್ನು ಲೋಕಕ್ಕೆ

ತೋರಿಸುತ್ತೇವೆ. ಇದು ಸೃಷ್ಟಿಕರ್ತನ ಅನೋಮೋದನೆಯನ್ನು ಪಡೆದಿರುತ್ತದೆ.

ನಮ್ಮ ಕೆಲಸದ ನೈತಿಕತೆಯು ಪಾರುಪತ್ಯಗಾರಿಕೆಯ ಮೌಲ್ಯಗಳನ್ನು ತೋರಿಸಬೇಕಾಗಿದೆ. ನೀತಿವಂತ ವ್ಯಕ್ತಿಯಲ್ಲಿರುವ ಪಾರುಪತ್ಯಗಾರಿಕೆಯು ಅವರು ಮಾಡುವ ಕೆಲಸದಲ್ಲಿ ಕಾಣುತ್ತದೆ. 'ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೆಜಸ್ಸಿನಂತೆಯೂ ಪ್ರಕಾಶಗೊಳಿಸುವನು.' (ಕೀರ್ತನೆ 37:6 ) ಪಾರುಪತ್ಯಗಾರನು ತನ್ನ ಪ್ರಭಾವವನ್ನು ತನ್ನ ಕೆಲಸದಲ್ಲಿ ಮತ್ತು ಹವ್ಯಾಸದಲ್ಲಿ ತೋರಿಸುತ್ತಾ ಅದನ್ನು ರಹಸ್ಯವಾದ ಸ್ಥಳದಲ್ಲಿ ಇಡದೆ ಅಥವಾ ಬುಟ್ಟಿಯಲ್ಲಿ ಬಚ್ಚಿಡದೆ (ಲೂಕ 11:33) ಬದಲಿಗೆ ಅದನ್ನು ಪಟ್ಟಣದ ಮೇಲೆ ಮತ್ತು ಬೆಟ್ಟದ ಮೇಲೆ ಇಡುತ್ತಾರೆ (ಮತ್ತಾಯ 5:14)ಈ ಜೀವನವನ್ನು ನೀವು ಉದ್ದೇಶಪೂರ್ವಕವಾಗಿ ಮನೆಯಲ್ಲಿ ಮತ್ತು ಕೆಲಸದ ಸ್ಥಳದಲ್ಲಿ ನಡೆಸುವಾಗ ನಿಮ್ಮ ಸುತ್ತಲೂ ಇರುವವರ ಮೇಲೆ ಪ್ರಭಾವವನ್ನು ಬೀರುವಿರಿ.

'ಪ್ರಕೃತಿಯಲ್ಲಿರುವ ಎಲ್ಲದಕ್ಕೂ ಕೂಡ ನಿಯಮಿತವಾದ ಕೆಲಸವನ್ನು ವಹಿಸಲಾಗಿದೆ ಮತ್ತು ಅದರ ಕುರಿತಾಗಿ ಅವು ಯಾವುವು ಕೂಡ ಗುಣುಗುಟ್ಟುವುದಿಲ್ಲ.ಆತ್ಮೀಯ ಪ್ರಪಂಚದಲ್ಲಿ ಪ್ರತಿಯೊಬ್ಬ ಪುರುಷನು ಮತ್ತು ಸ್ತ್ರಿಯು ಕೂಡ ಪ್ರತ್ಯೇಕವಾದ ಕೆಲಸ ಮತ್ತು ಕಾರ್ಯಕ್ಷೇತ್ರವಿರುತ್ತದೆ. ಕ್ರಿಸ್ತನಲ್ಲಿ ನಮಗೆ ನೀಡಲಾಗಿರುವ ಬಹುಮಾನಕ್ಕೆ ತಕ್ಕಂತೆ ನಾವು ಆತನ ಸೇವೆಯನ್ನು ನಡೆಸಬೇಕಾಗಿದೆ. .... ಈಗ ನಿಮ್ಮ ಸಮಯ ಮತ್ತು ಅವಕಾಶವಾಗಿದೆ....ನಿಜವಾದ ನೈತಿಕ ಬೆಲೆಯನ್ನು ತೋರಿಸುವ ಸ್ಥಿರವಾದ ಸ್ವಭಾವವನ್ನು ತೋರಿಸುವ ಸಮಯ ಬಂದಿದೆ. ನಿಮ್ಮ ಸೇವೆಯಲ್ಲಿ ಕ್ರಿಸ್ತನಿಗೆ ಸರ್ವ ಅಧಿಕಾರವಿದೆ. ನಿಮ್ಮ ಹೃದಯಪೂರ್ವಕವಾಗಿ ಆತನಿಗೆ ನಿಮ್ಮ ಹೃದಯವನ್ನು ಅರ್ಪಿಸಿರಿ. **ಎಲೆನ್ ಜಿ ವೈಟ್ ದೇವರೊಂದಿಗೆ ಒಂದು ದಿನ, ಪುಟ 243.**

ನೀವು ಕೆಲಸ ಮಾಡುವ ಸ್ಥಳದಲ್ಲಿ ನಿಮ್ಮ ಪ್ರಭಾವವು ಹೇಗೆ ಕೆಲಸ ಮಾಡುತ್ತದೆ ಅಥವಾ ನಿಮ್ಮನ್ನು ಮನೆಯಲ್ಲಿ ನೋಡುವವರು ನಿಮ್ಮ ಪ್ರಭಾವಕ್ಕೆ ಹೇಗೆ ಒಳಗಾಗಿದ್ದಾರೆ. ನಿಮ್ಮ ನಂಬಿಕೆಯ ಕುರಿತಾಗಿ ನೀವು ಅವರಿಗೆ ಯಾವ ಸಂದೇಶವನ್ನು ರವಾನಿಸುವಿರಿ?

**ಪಾಠ 13 ಪಾರುಪತ್ಯಗಾರಿಕೆಯ ಪ್ರತಿಫಲಗಳು ಮಾರ್ಚ್ 24–30**

**ಗುರುವಾರ ಮಾರ್ಚ್ 29**

## ನಾವು ಕೇಳಲು ಬಯಸುವ (ಮತ್ತು ಕೇಳಲು ಬಯಸದಿರುವ) ಮಾತುಗಳು

ಈ ಲೋಕದಲ್ಲಿ ನಾವು ಯಾತ್ರಿಕರು ಮತ್ತು ಪರದೇಶಿಗಳು ಆಗಿದ್ದೇವೆ, ನಮ್ಮ



ಅಂತಿಮ ಗಮ್ಯಸ್ಥಾನವಾದ ಪರಲೋಕವು ಪರಿಪೂರ್ಣ, ಸುಂದರ, ಮತ್ತು ಶಾಂತಿಯ ಸ್ಥಳವಾಗಿದೆ. (ಇಬ್ರಿಯರಿಗೆ 11:13,14). ಹಾಗಾದರೆ, ನಾವು ಇಲ್ಲಿ ಸ್ವಲ್ಪ ಕಾಲ ಜೀವಿಸಬೇಕು. ಕ್ರೈಸ್ತರ ದೃಷ್ಟಿಕೋನವು ವಿಶೇಷವಾಗಿ ಮಹಾಹೋರಾಟದಲ್ಲಿ ಪ್ರಕಟಿಸಲಾಗಿದೆ, ಆದ್ದರಿಂದ ನಾವು ಯಾವುದೇ ಸ್ವಾಭಾವಿಕವಾದ ಪಕ್ಷಗಳಿಗೆ ಸೇರಿದವರಲ್ಲ. ನಾವು ದೇವರಿಗಾಗಿ ಅಥವಾ ಶತ್ರುವಿಗಾಗಿ ಜೀವಿಸುತ್ತೇವೆ. 'ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ. (ಮತ್ತಾಯ 12:30). ಆತನು ತಿರುಗಿ ಈ ಲೋಕಕ್ಕೆ ಬರುವಾಗ ನಾವು ಯಾರ ಪಕ್ಷದಲ್ಲಿದ್ದೇವೆ ಮತ್ತು ಯಾರ ಪರವಾಗಿ ಕೆಲಸ ಮಾಡಿದ್ದೇವೆ ಎಂದು ಬಹಿರಂಗವಾಗುತ್ತದೆ.

ಕ್ರಿಸ್ತನು ಬಂದ ಸ್ವಲ್ಪ ಸಮಯದ ನಂತರ, ಕ್ರಿಸ್ತನನ್ನು ಹಿಂಬಾಲಿಸುತ್ತಿದ್ದೇವೆ ಎಂದು ಹೇಳಿಕೊಳ್ಳುವವರು ಎರಡು ವಾಕ್ಯಗಳನ್ನು ಕೇಳುವರು.ಆ ವಾಕ್ಯಗಳು ಯಾವುವು ಮತ್ತು ಆ ಪ್ರತಿಯೊಂದು ವಾಕ್ಯದ ಅರ್ಥವೇನು?

ಮತ್ತಾಯ 25:21 ____________________________________

____________________________________

ಮತ್ತಾಯ 7:23 ____________________________________

____________________________________

'ಭಲಾ, ನಂಬಿಗಸ್ತನೆ' ಎಂಬ ಮಾತುಗಳು ಪಾರುಪತ್ಯಗಾರನಿಗೆ ಕೇಳಲು ಬಹಳ ಸೊಗಸಾದ ಮತ್ತು ಸಮಾಧಾನಕರವಾದ ಮಾತುಗಳಾಗಿವೆ. ಆತನ ಅಸ್ತಿಯನ್ನು ನಿರ್ವಹಿಸಿದ್ದಕ್ಕಾಗಿ ಮತ್ತು ನಮ್ಮ ಸಾಮರ್ಥ್ಯವನ್ನೆಲ್ಲಾ ಪಣಕ್ಕೆ ಒಡ್ಡಿ ಮಾಡಿದೆ ಕೆಲಸಕ್ಕೆ ದೇವರು ನೀಡುವ ದೈವಿಕವಾದ, ಪರಲೋಕದ ಸಮ್ಮತಿಯನ್ನು ಪಡೆದ ಈ ಮಾತುಗಳು ರಕ್ಷಣೆಯು ನಮ್ಮ ಕ್ರಿಯೆಗಳಿಂದ ಬಂದಿದ್ದಲ್ಲ ಬದಲಿಗೆ ಕ್ರಿಸ್ತನ ರಕ್ತದ ಬಲಿದಾನದ ಮೂಲಕ ಮಾತ್ರ ಅದು ಸಾಧ್ಯವಾಯಿತು ಎಂದು ಸ್ಪಷ್ಟವಾಗಿ ತಿಳಿಸುವ ಮಾತುಗಳಾಗಿವೆ. ( ರೋಮ 3:21, ರೋಮ 4:6).

ಪಾರುಪತ್ಯಗಾರನ ಜೀವನವು ಅವನು ಅಥವಾ ಅವಳು ಹೊಂದುವ ನಂಬಿಕೆಯ ಪ್ರತಿಬಿಂಬವಾಗಿದೆ. ಕ್ರಿಯೆಗಳಿಂದ ರಕ್ಷಣೆಯನ್ನು ಹೊಂದಲು ಬಯಸುವವರ ಮಾತುಗಳಲ್ಲಿ ಮತ್ತು ಅವರು ದೇವರ ಮುಂದೆ ತೋರಿಸಲು ಬಯಸುವ ಕ್ರಿಯೆಗಳಿಂದ ನೋಡಬಹುದು (ಮತ್ತಾಯ 7:21, 22) ಮತ್ತಾಯ 7:23 ಅಂತಹ ಸ್ವಯಂ ನೀತಿ ನಿರ್ಣಯದ

ಕುರಿತಾದ ಪ್ರತಿಫಲವನ್ನು ತೋರಿಸುತ್ತದೆ.

ಕ್ರಿಸ್ತನ ಹಿಂಬಾಲಕರು ಆತನ ಅಸ್ತಿಯನ್ನು ಆತನಗೆ ಹಿಂತಿರುಗಿಸುವಾಗ, ಮತ್ತು ಅವರಿಗಾಗಿ ಕೂಡಿಟ್ಟದ್ದನ್ನು ಅವರು ದೇವರಿಗೆ ನೀಡುವಾಗ ಆಗ ಆವರು 'ಭಲಾ, ನಂಬಿಗಸ್ತನಾದ ಒಳ್ಳೆ ಅಳು, .... ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು' ಎಂಬ ಮಾತುಗಳನ್ನು ಹೇಳುತ್ತಾನೆ. **ಎಲೆನ್ ಜಿ ವೈಟ್ ದಿ ಡಿಸೈರ್ ಆಫ್ ಎಜಸ್ ಪುಟ 523.**

ಕೊನೆಯಲ್ಲಿ, ಪಾರುಪತ್ಯಗಾರಿಕೆಯು ಎರಡೂ ಶ್ರೇಷ್ಠವಾದ ಆಜ್ಞೆಗಳ ನಡುವೆ ಜೀವಿಸುವುದಾಗಿದೆ, ದೇವರನ್ನು ಪ್ರೀತಿಸು ಮತ್ತು ನಿನ್ನ ನೆರೆಹೊರೆಯವರನ್ನು ಪ್ರೀತಿಸು, ಈ ಎರಡೂ ಕೂಡ ಒಬ್ಬ ಪಾರುಪತ್ಯಗಾರನು ಮಾಡುವ ಎಲ್ಲಾ ಕಾರ್ಯಗಳ ಉದ್ದೇಶ ಮತ್ತು ಅವನನ್ನು ನಡೆಸುವ ಶಕ್ತಿಯಾಗಿರುತ್ತದೆ.

ಈ ಎರಡೂ ಆಜ್ಞೆಗಳು ಯಾವ ರೀತಿಯಲ್ಲಿ ನಿಮ್ಮ ಜೀವನ ಮತ್ತು ಪಾರುಪತ್ಯಗಾರಿಕೆಯಲ್ಲಿ ಪ್ರತಿಬಿಂಬಿಸುತ್ತವೆ?

**ಪಾಠ 13 ಪಾರುಪತ್ಯಗಾರಿಕೆಯ ಪ್ರತಿಫಲಗಳು ಮಾರ್ಚ್ 24–30**

**ಶುಕ್ರವಾರ ಮಾರ್ಚ್ 30**

## ಹೆಚ್ಚಿನ ಚಿಂತನೆ:

ದೇವರ ಪ್ರೀತಿಯನ್ನು ಪ್ರಕಟಿಸಲು ಯೇಸುವು ಈ ಲೋಕಕ್ಕೆ ಬಂದನು. ಆತನು ಆರಂಭಿಸಿದ ಕೆಲಸವನ್ನು ಆತನ ಹಿಂಬಾಲಕರು ಮುಂದುವರೆಸಬೇಕು. ಒಬ್ಬರನ್ನೊಬ್ಬರು ಬಲಪಡಿಸುತ್ತಾ ಮತ್ತು ಸಹಾಯ ಮಾಡುತ್ತಾ ಮುಂದೆ ಸಾಗೋಣ. ಇತರರಿಗೆ ಸಹಾಯ ಮಾಡುವುದರಲ್ಲಿರುವ ನಿಜವಾದ ಆನಂದವನ್ನು ಹುಡುಕೋಣ.ದೇವರನ್ನು ಪ್ರೀತಿಸಿ ಮತ್ತು ನೆರೆಹೊರೆಯವರನ್ನು ಪ್ರಿತಿಸುವುದರ ಮೂಲಕ ಮನುಷ್ಯನು ತನ್ನನ್ನು ತಾನು ಪ್ರೀತಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಬಹುದು. ಅವನಲ್ಲಿ ಎಷ್ಟು ಸ್ವಾರ್ಥದ ಆತ್ಮ ಸಾಯುತ್ತದೋ ಅಷ್ಟು ಆನಂದವಾಗಿ ಇರುತ್ತಾನೆ. ಯಾಕೆಂದರೆ ಅದುವೇ ದೇವರು ಅವನ ಜಿವನದಲ್ಲಿ ಎದುರು ನೋಡುವ ಫಲವಾಗಿದೆ.

'ಸಭೆಯಲ್ಲಿ ಜೀವವಿದ್ದರೆ ಅಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆ ಕಾಣಿಸುತ್ತದೆ. ಅಲ್ಲಿ ನಿರಂತರವಾದ ಬದಲಾವಣೆ ಕಾಣುತ್ತದೆ, ಅಂದರೆ ಕೊಡುವುದು ಮತ್ತು ತೆಗೆದುಕೊಳ್ಳುವುದು, ಪಡೆಯುವುದು ಮತ್ತು ದೇವರಿಗೆ ಆತನದನ್ನು ಆತನಿಗೆ



ಹಿಂತಿರುಗಿಸುವುದು. ಪ್ರತಿಯೊಬ್ಬ ನಿಜವಾದ ವಿಶ್ವಾಸಿಗೆ ದೇವರು ಬೆಳಕು ಮತ್ತು ಆಶೀರ್ವಾದವನ್ನು ನೀಡುತ್ತಾನೆ, ಮತ್ತು ಈ ಆಶೀರ್ವಾದಗಳನ್ನು ದೇವರ ಕೆಲಸವನ್ನು ಮಾಡುವಾಗ ಒಳ್ಳೆಯ ಪಾರುಪತ್ಯಗಾರನಾಗಿ ಅದನ್ನು ಬೇರೆಯವರಿಗೆ ನೀಡುತ್ತಾನೆ. ಅವನು ಪಡೆದಿದ್ದನು ಇತರರಿಗೆ ನೀಡುತ್ತಾನೆ. ಅವನು ಕೊಡುವ ಹಾಗೆ ಅವನು ಪಡೆದುಕೊಳ್ಳುವ ಸಾಮರ್ಥ್ಯವು ಹೆಚ್ಚಾಗುತ್ತದೆ. ಅವನ ಕೋಣೆಯಲ್ಲಿ ಹೊಸದಾದ ಕೃಪೆ ಮತ್ತು ಸತ್ಯಕ್ಕೆ ಜಾಗವಿರುತ್ತದೆ. ಸ್ಪಷ್ಟವಾದ ಬೆಳಕು, ಹೆಚ್ಚಿನ ಜ್ಞಾನ ಅವನದಾಗುತ್ತವೆ. ಈ ಕೊಡುವುದು ಮತ್ತು ಪಡೆದುಕೊಳ್ಳುವುದರ ಮೇಲೆ ಸಭೆಯ ಅಭಿವೃದ್ಧಿ ಆಧಾರವಾಗಿರುತ್ತದೆ. ಅವನಿಂದ ಸತ್ಯವೂ ಬೇರೆಯವರಿಗೆ ಹೋಗದಿದ್ದರೆ ಅವನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುವನು. ನಾವು ಪರಲೋಕದ ವಸ್ತುಗಳನ್ನು ಇತರರಿಗೆ ನೀಡಿದಾಗ ಮಾತ್ರ ನಾವು ಹೊಸ ವಸ್ತುಗಳನ್ನು ಪಡೆಯುತ್ತೇವೆ.' **ಎಲೆನ್ ಜಿ ವೈಟ್, ಕೌನ್ಸಲ್ಸ್ ಆನ್ ಸ್ಟೀವರ್ಡ್ ಶಿಪ್, ಪುಟ 36.**

ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರನ್ನು ನಂಬುವುದು ಹೇಗೆ ಸಂತೃಪ್ತಿಗೆ ನಡೆಸುತ್ತದೆ? ಜ್ಞಾನದ ವಿಷಯದಲ್ಲಿ ದೇವರನ್ನು ಪೂರ್ಣ ಹೃದಯದಿಂದ ನಂಬುವುದು ಹೇಗೆ? 1 ಕೊರಿಂಥ 10:5. ಎಲ್ಲವೂ ಒಳ್ಳೆಯದಕ್ಕೆ ನಡೆಯುತ್ತವೆ ಎಂದು ಹೇಳುವುದು ಯಾಕೆ ಅಷ್ಟು ಸುಲಭ ಆದರೆ ನಂಬುವುದು ಬಹಳ ಕಷ್ಟ? ನಾವು ಜ್ಞಾನದ ವಿಷಯದಲ್ಲಿ ದೇವರನ್ನು ನಂಬುತ್ತೇವೆ ಎಂದು ಹೇಳಿದರೂ ಕೂಡ ಭವಿಷ್ಯದ ಕುರಿತಾಗಿ ಯಾಕೆ ಭಯ ಪಡುತ್ತೇವೆ?

2. ತರಗತಿಯಲ್ಲಿ ಈ ಪ್ರಶ್ನೆಯನ್ನು ಕೇಳಿರಿ ಮತ್ತು ಉತ್ತರಗಳನ್ನು ಹೋಲಿಸಿ ನೋಡಿರಿ: 25 ಮಾತುಗಳು ಅಥವಾ ಕಡಿಮೆಯಲ್ಲಿ ಪಾರುಪತ್ಯಗಾರಿಕೆ ಎಂದರೆ ಏನು ಎಂದು ಬರೆಯಿರಿ? ನಂತರ ಇನ್ನೂ 25 ಅಥವಾ ಅದಕ್ಕಿಂತ ಕಡಿಮೆ ಮಾತುಗಳಲ್ಲಿ 'ಕ್ರೈಸ್ತಿಯ ಜೀವನದಲ್ಲಿ ಪಾರುಪತ್ಯಗಾರಿಕೆಯು ಹೇಗೆ ಪ್ರಾಮುಖ್ಯತೆಯನ್ನು' ಪಡೆದಿದೆ ಎಂಬುದಾಗಿ ಬರೆಯಿರಿ.

3. ಮತ್ತಾಯ 7;21–23 ನ್ನು ಮತ್ತೆ ಓದಿರಿ. ಇಲ್ಲಿ ಏನು ನಡೆಯುತ್ತಿದೆ?ಅವರು

ಮಾಡಿದ ಕೆಲಸಗಳನ್ನು ಅವರು ಯಾಕೆ ಹೇಳುತ್ತಿದ್ದಾರೆ? ಈ ಮಾತುಗಳು ಅವರ ಕುರಿತಾಗಿ ಏನು ಹೇಳುತ್ತವೆ? ನಾವು ಒಳ್ಳೆಯ ಪಾರುಪತ್ಯಗಾರರಾಗಲು ಪ್ರಯತ್ನ ಪಟ್ಟರು ಕೂಡ, ನಮ್ಮ ಜೀವನವನ್ನು ನಂಬಿಕೆ ಮತ್ತು ವಿಧೇಯತೆಯಲ್ಲಿ ಜೀವಿಸಿದರೂ ಕೂಡ ದೇವರ ಹೆಸರಿನಲ್ಲಿ ಇತರರಿಗೆ ಒಳ್ಳೆಯದನ್ನು ಮಾಡಲು ಬಯಸಿದರೂ ಕೂಡ ಸ್ವಯಂ ವಂಚನೆಗೆ ಹೇಗೆ ಒಳಗಾಗಬಹುದು?

4. ಕ್ರೈಸ್ತರು ಪ್ರಭಾವವು ಕೇವಲ ವ್ಯಯಕ್ತಿಕ ಮಟ್ಟದಲ್ಲಿ ಮಾತ್ರ ಇರುತ್ತದೆ ಎಂದು ನಾವು ಆಲೋಚಿಸುತ್ತೇವೆ. ಆದರೆ ನಿಮ್ಮ ಸ್ಥಳೀಯ ಸಭೆಯ ಮಟ್ಟದಲ್ಲಿ ಇದು ಏನು ಪಾತ್ರ ವಹಿಸುತ್ತದೆ. ನಿಮ್ಮ ಸುತ್ತಲೂ ಇರುವ ಸಮುದಾಯದ ಮೇಲೆ ನಿಮ್ಮ ಸ್ಥಳಿಯ ಸಭೆಯು ಯಾವ ಪ್ರಭಾವವನ್ನು ಬೀರುತ್ತದೆ?

* * *